MYSORE LEGISLATIVE ASSEMBLY

EIGHTY-FIFTH DAY.

Saturday, 14th December 1963.

The House met in the Assembly Hall, Vidhana Soudha, Bangalore, at Thirty Minutes past Eight of the Clock.

MR. SPEAKER (SRI B. VAIKUNTA BALIGA, B.A., B.L.) in the Chair.

STARRED QUESTIONS

(to which oral answers were given)

Present Rate of Licence fee per Cart-load of Fuel and Bamboos.

*Q.—783. Sri V. S. LAKSHMIKANTHAPPA (Sagar).—

Will the Government be pleased to state :—

(*a*) the present rate of licence fee per cart-load of fuel and bamboos, per hundred and the date of giving effect to such enhancement from the old rate ;

(*b*) the ryots' privileges extended in this behalf in Shimoga District ?

A.—Sri B. RACHIAH (Minister for Forests and Fisheries).—

(*a*) Fuel	...	Rs. 2–50 per cart-load.
Bamboos (big)	...	Rs. 12–00 per hundred.
Bamboos (small)	...	Rs. 10–00 per hundred.

The date of enhancement is 1st April 1963.

(*b*) *Vide* statement placed on the Table of the House.

[Placed in The Mysore Legislature Library *Vide* No. 5/L. A. dated December 1963.]

ಶ್ರೀ ವಿ. ಎಸ್. ಲಕ್ಷ್ಮೀಕಾಂತಪ್ಪ.—1-4-63 ರಿಂದ ದರಗಳನ್ನು ಏರಿಸುವುದಕ್ಕೆ ಏನು ಕಾರಣವಿತ್ತು ? ಅಲ್ಲಿ ಏನಾದರೂ ಕಾಡು ಬೆಳವಣಿಗೆಯನ್ನು ಹೆಚ್ಚುಮಾಡಿದ್ದೀರಾ ಅಥವಾ ಹೆಚ್ಚಿನ ಸವಲತ್ತು ಕೊಟ್ಟುಗಳುಗಳ ಬೆಳವಣಿಗೆಗಾಗಲೀ ಹೆಚ್ಚಿನ ಸುಧಾರಣೆ ಮಾಡಿದ್ದೀರಾ ?

ಶ್ರೀ ಬಿ. ರಾಚಯ್ಯ.—ಸುಧಾರಣೆಯನ್ನು ಮಾಡುತ್ತಿದ್ದೇವೆ. ಬಹಳ ಹಿಂದಿನಕಾಲದಲ್ಲಿ ಗೊತ್ತುಮಾಡಿದ್ದ ದರಗಳಾಗಿದ್ದವು. ಈಗಿನ ಮಾರ್ಕೆಟ್ ದರಗಳು ಜಾಸ್ತಿಯಾಗಿರುವುದರಿಂದ ಈ ದರಗಳನ್ನೂ ಹೆಚ್ಚುಮಾಡುವುದು ಯೋಗ್ಯವೆಂದು ಭಾವಿಸಿ ಜಾಸ್ತಿ ಮಾಡಲಾಗಿದೆ.

ಶ್ರೀ ವಿ ಎಸ್. ಲಕ್ಷ್ಮೀಕಾಂತಪ್ಪ.—ಏಪ್ರಿಲ್ ಮಾಹೆಗೆ ಹಿಂದೆ ಇದ್ದ ದರಗಳು ಯಾವುವು ?

ಶ್ರೀ ಬಿ. ರಾಚಯ್ಯ.—ಒಂದು ಗಾಡಿ ಸೌದೆಗೆ ಒಂದು ರೂಪಾಯಿ 50 ನಯೇ ಪೈಸೆ.

ಶ್ರೀ ಎಸ್. ಸುಬ್ಬಯ್ಯ ನಾಯಕ್.—1-4-63 ರಿಂದ ಏರಿಸಿದ ದರಗಳು ಶಿವಮೊಗ್ಗ ಜಿಲ್ಲೆಗೆ ಮಾತ್ರ ಅನ್ವಯಿಸುತ್ತವೆಯೋ ಅಥವಾ ಇಡೀ ರಾಜ್ಯಕ್ಕೆ ಅನ್ವಯಿಸುತ್ತವೆಯೋ ?

ಶ್ರೀ ಬಿ. ರಾಚಯ್ಯ.—ಇಡೀ ರಾಜ್ಯಕ್ಕೆ ಸಂಬಂಧಪಟ್ಟದ್ದು.

ಶ್ರೀಮತಿ ಬಿ. ಎಸ್. ಸುಬ್ಬಮ್ಮ.—ರೈತರು ಹೊಲಗಳಿಗೆ ಬೇಲಿ ಹಾಕುವುದಕ್ಕೆ ತರುವ ಮುಳ್ಳಿಗೆ ಎಷ್ಟು ಫೀ ಹಾಕಿದ್ದೀರಿ ಸ್ವಾಮಿ ?

ಶ್ರೀ ಬಿ. ರಾಚಯ್ಯ.—ಒಂದು ಗಾಡಿಗೆ ಒಂದು ರೂಪಾಯಿ 25 ನಯೇಪೈಸೆ.

ಶ್ರೀಮತಿ ಬಿ. ಎಸ್. ಸುಬ್ಬಮ್ಮ.—ಹಳ್ಳಿಗಳಲ್ಲಿ ಗಾಡಿ ಒಂದಕ್ಕೆ ಒಂದೂವರೆ ರೂಪಾಯಿ ವಸೂಲ್ಮಾಡುತ್ತ ರೈತರಿಗೆ ತೊಂದರೆ ಕೊಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಸ್ವಾಮಿ ?

ಶ್ರೀ ಬಿ. ರಾಚಯ್ಯ.—ಬಂದಿಲ್ಲ.

Sri S. SIVAPPA.—Has it come to the notice of the Government that fuel cut from the trees of the raiyats in their own lands is being charged at the rate of Rs. 2 in every taluk headquarters ?

Sri B. RACHAIAH.—It is not true, Sir.

Sri S. SIVAPPA.—Will the Government be pleased to advise Departmental Heads not to collect according to your orders on the fuel cut by the raiyats from their own lands and brought within municipal limits ?

Sri B. RACHAIAH.—I am not aware of fees being collected by the departmental officers for the fuel cut from private lands.

ಶ್ರೀ ಹೆಚ್. ಆರ್. ಕೇಶವ ಮೂರ್ತಿ.—ತೇಗದ ಮರ, ರೋಸ್‌ವುಡ್ ಮುಂತಾದ ಒಳ್ಳೆಳ್ಳೆಯ ಮರಗಳನ್ನು ಗಜಕ್ಕೆ ತುಂಡು ಹಾಕಿ ಲಾರಿ ರೋಡುಗಳಲ್ಲಿ ಸಾಗಿಸುವ ಜೊತೆಯಲ್ಲಿ ಬೆಂಗಳೂರಿಗೆ ತೆಗೆದುಕೊಂಡು ಬರುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ? ಇದರಿಂದ ಲಕ್ಷಾಂತರ ರೂಪಾಯಿ ಲುಕ್ಸಾನಾಗುತ್ತಿರುವುದನ್ನು ತಡೆಗಟ್ಟುವುದಕ್ಕೆ ಏನು ಕ್ರಮ ತೆಗೆದುಕೊಂಡಿದ್ದೀರಿ ?

ಶ್ರೀ ಬಿ. ರಾಚಯ್ಯ.—ಆ ರೀತಿ ಆಗುತ್ತ ಇಲ್ಲ. ಅಂಥ ವಿಚಾರಗಳನ್ನು ನನ್ನ ಗಮನಕ್ಕೆ ತಂದರೆ ಅದಕ್ಕೆ ತಕ್ಕ ಬಂದೋಬಸ್ತು ಮಾಡುತ್ತೇನೆ.

ಶ್ರೀ ಕೆ. ಎರ್. ಶಿವಲಿಂಗೇಗೌಡ.—ಕೆಲವು ಕಡೆ ಬೊಂಬು ತರಲು ಲೈಸೆನ್ಸ್ ಕೊಡುತ್ತಿಲ್ಲ ಎನ್ನುವುದು ಗೊತ್ತಿದೆಯೇ ?

ಶ್ರೀ ಬಿ. ರಾಚಯ್ಯ.—ಕೆಲವು ತಿಂಗಳು ಮಾತ್ರ ಎಂದರೆ ಬಿದಿರು ಮೊಳಕೆ ಬರುವ ತಿಂಗಳಲ್ಲಿ ಮಾತ್ರ ಲೈಸೆನ್ಸ್ ಕೊಡುತ್ತ ಇಲ್ಲ.

ಶ್ರೀ ಜಿ. ದುಗ್ಗಪ್ಪ.—ಮನೆಗಳು ಸುಟ್ಟು ಹೋದಾಗ ಮತ್ತು ಹರಿಜನರಿಗೆ, ಬಡವರಿಗೆ ಮನೆ ಗಳನ್ನು ಕಟ್ಟಿಕೊಳ್ಳಲು ಮಾಫಿ ಲೈಸೆನ್ಸ್ ಕೊಡುತ್ತಿದ್ದರು. ಅಂಥದ್ದಕ್ಕೆ ತಮ್ಮ ಆರ್ಡರ್ ಅನ್ವಯ ಸುತ್ತದೆಯೇ ?

ಶ್ರೀ ಬಿ. ರಾಚಯ್ಯ.—ಹರಿಜನರಿಗೆ ಕಾಡು ಜಾತಿಯ ಮರಗಳನ್ನು ಮತ್ತು ಬೊಂಬುಗಳನ್ನು ತರುವುದಕ್ಕೆ ಮುಫತ್ತಾಗಿ ಲೈಸೆನ್ಸ್ ಕೊಡತಕ್ಕ ಅವಕಾಶವಿದೆ.

ಶ್ರೀ ಎಸ್. ಸುಬ್ಬಯ್ಯ ನಾಯಕ್.—ಉತ್ತರದಲ್ಲಿ ಕೊಟ್ಟಿರುವ ದರಗಳು ಸ್ವಂತ ಉಪಯೋ ಗಕ್ಕೆ ಮಾತ್ರವೋ ಅಥವಾ ಅದನ್ನು ವ್ಯಾಪಾರ ಮಾಡಬಹುದೋ ?

ಶ್ರೀ ಬಿ. ರಾಚಯ್ಯ.—ಸ್ವಂತಕ್ಕಾಗಲೀ, ವ್ಯಾಪಾರಕ್ಕಾಗಲೀ ಏನೂ ವ್ಯತ್ಯಾಸವಿಲ್ಲ.

ಶ್ರೀ ಆರ್. ಎನ್. ಲಕ್ಷ್ಮೀಪತಿ.—ಗೌರಿಬಿದನೂರು ತಾಲ್ಲೂಕಿನಲ್ಲಿ ಒಂದು ಗಾಡಿ ಮುಳ್ಳುಕಂಪೆಗೆ ಎರಡೂವರೆ ರೂಪಾಯಿಗಳನ್ನು ವಸೂಲ್ಮಾಡುತ್ತಿದ್ದಾರೆ. ಇದು ಸರ್ಕಾರದ ಗಮನಕ್ಕೆ ಬಂದಿದೆಯೇ ? ಈ ದರವನ್ನು ಎಂಟಾಣೆಗೆ ಇಳಿಸುವುದಕ್ಕೆ ಆಗುತ್ತದೆಯೇ ?

ಶ್ರೀ ಬಿ. ರಾಚಯ್ಯ.—ಒಂದು ಗಾಡಿಗೆ ಒಂದು ರೂಪಾಯಿ 25 ನಯೇಪೈಸೆಗಿಂತ ಹೆಚ್ಚಾಗಿ ವಸೂಲ ಮಾಡಬಾರದು. ಹೆಚ್ಚಾಗಿ ವಸೂಲ ಮಾಡುತ್ತಿರುವುದನ್ನು ನನ್ನ ಗಮನಕ್ಕೆ ತಂದರೆ ಸಂಬಂಧ ಪಟ್ಟವರ ಮೇಲೆ ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಎಚ್. ಆರ್. ಕೇಶವ ಮೂರ್ತಿ.—ಫಾರೆಸ್ಟ್‌ನಲ್ಲಿ ಈ ಶುಲ್ಕವನ್ನು ಯಾರು ಎಲ್ಲಿ ವಸೂಲು ಮಾಡುತ್ತಾರೆ ?

ಶ್ರೀ ಬಿ. ರಾಚಯ್ಯ.—ಅದಕ್ಕೆ ಲೈಸೆನ್ಸ್ ಕೊಡತಕ್ಕ ಏಜೆನ್ಸಿ ಇದೆ ಅವರು ವಸೂಲು ಮಾಡು ತ್ತಾರೆ.

ಶ್ರೀ ಎ. ಎಸ್. ಲಕ್ಷ್ಮೀಕಾಂತಪ್ಪ.—ರೈತರಿಗೆ ಬೇಕಾಗತಕ್ಕ ವ್ಯವಸಾಯದ ಮಟ್ಟಗಳಿಗೆ ಇವನ್ನು ಉಪಯೋಗ ಮಾಡಿಕೊಳ್ಳಲಕ್ಕೆ ಅವಕಾಶವಿದೆ ಎಂದು ಹೇಳಿದ್ದೀರಿ. ಅಲ್ಲಿ ಯಾವ ಒಂದು ವ್ಯವಸಾಯದ ಸಾಮಾನಿಗೆ ತಂಟಲಕ್ಕೆ ಹೋದರೂ ಕೂಡ ಅದು ಸಾಧ್ಯವಾಗದೇ, ಬಹಳ ಬಿಗಿಯಾಗಿ

ಕೇಸುಗಳನ್ನು ಮಾಡುವುದಕ್ಕೆ ಸೂಚನೆಗಳನ್ನು ಕೊಟ್ಟಿದ್ದೀರಾಗಿ ಅಲ್ಲಿನ ಅಧಿಕಾರಿಗಳು ಹೇಳುತ್ತಾ ಇದ್ದಾರೆ ಹಾಗೂ ಅವರು ಅನೇಕ ಕೇಸುಗಳನ್ನು ಕೂಡ ಹಾಕುತ್ತಾ ಇದ್ದಾರೆ ಎಂಬುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಶ್ರೀ ಬಿ. ರಾಚಯ್ಯ.—ಎಲ್ಲಿ ಪರವಾನೆ ಇಲ್ಲದೇ ಕಳ್ಳ ಸಾಗಾಣಿಕೆ ಮಾಡುತ್ತಾ ಇದ್ದಾರೆ ಅಂತಹ ಕಡೆ ಕ್ರಮ ತೆಗೆದುಕೊಳ್ಳಬೇಕೆಂದು ಹೇಳಿ ಒಂದು ಡೈರೆಕ್ಷನ್ ಕೊಟ್ಟಿರುವುದು ನಿಜ. ಆದರೆ ಮಲೆನಾಡು ಪ್ರಿವಿಲೇಜಸ್ ಅಂತ ಏನು ಇದೆ ಅದರ ಪ್ರಕಾರ ಅವರು ಪರವಾನೆ ತೆಗೆದುಕೊಂಡು ಹೋದರೆ ಅಂತಹ ಕಡೆ ಯಾವ ವಿಧವಾದ ಕ್ರಮವನ್ನೂ ತೆಗೆದುಕೊಳ್ಳುವುದಕ್ಕೆ ಅವಕಾಶವೇ ಇಲ್ಲ.

ಶ್ರೀಮತಿ ಚಂಪಾಬಾಯಿ ಭೋಗಲೆ.—ಕಳ್ಳ ಸಾಗಾಟ ಮಾಡುವವರ ಮೇಲೆ ಕ್ರಮ ತೆಗೆದುಕೊಳ್ಳುವುದಾಗಿ ಹೇಳಿದಿರಿ, ರೈತರು ತೆಗೆದುಕೊಂಡು ಹೋಗತಕ್ಕ ಸಾಮಾನುಗಳು ಕಳ್ಳ ಸಾಗಾಟ ಹೇಗೆ ಆಗುತ್ತದೆ ? ರಂಜೆ ಮತ್ತು ಕುಂಜೆ ಮಾಡುವುದರ ಸಲುವಾಗಿ ತೆಗೆದುಕೊಂಡು ಹೋಗುವುದರ ಮೇಲೂ ಕೂಡ 10-20 ರೂಪಾಯಿ ಹೆಚ್ಚಿಗೆ ವಸೂಲು ಮಾಡುತ್ತಾ ಇದ್ದಾರೆ. ರೈತರಿಗೆ ಮುಖತ್ತಾಗಿ ಕೊಟ್ಟಮೇಲೆ ಅದನ್ನು ಕಳ್ಳಸಾಗಾಟ ಎಂದು ಹೇಗೆ ಹೇಳುತ್ತೀರಿ ?

ಶ್ರೀ ಬಿ. ರಾಚಯ್ಯ.—ನಾನು ಅದನ್ನು ಕಳ್ಳ ಸಾಗಾಟ ಎಂದು ಹೇಳಲಿಲ್ಲ. ಆದರೂ ಕೂಡ ಯಾವ ರೀತಿಯಲ್ಲಿ ಕಳ್ಳ ಸಾಗಾಣಿಕೆಯಾಗುತ್ತಾ ಇರುತ್ತದೆ ಎಂಬುದನ್ನು ತಾವು ಎಲ್ಲರೂ ಪೇಪರುಗಳಲ್ಲಿ ನೋಡುತ್ತಾ ಇರುತ್ತೀರಿ. ಆದ್ದರಿಂದ ಸಂಪೂರ್ಣವಾಗಿ ಕಳ್ಳ ಸಾಗಾಣಿಕೆ ನಡೆಯುತ್ತಾ ಇಲ್ಲ ಎಂದು ಒಪ್ಪಿಕೊಳ್ಳುವುದಕ್ಕಾಗುವುದಿಲ್ಲ, ಆದರೆ ಲಂಚ ವಸೂಲು ಮಾಡುತ್ತಾ ಇದ್ದಾರೆ ಎಂಬುದು ನಮ್ಮ ಗಮನಕ್ಕೆ ಬಂದಿಲ್ಲ. ಆ ರೀತಿ ಎಲ್ಲ ವಸೂಲು ಮಾಡುತ್ತಾರೆ ಎಲ್ಲ ನಡೆಯುತ್ತಾ ಇದೆ ಎಂಬುದನ್ನು ಸರ್ಕಾರದವರ ಗಮನಕ್ಕೆ ತಂದು ಕ್ರಮ ತೆಗೆದುಕೊಳ್ಳದಿದ್ದರೆ ಇದು ಸರಿಯಾಗಿ ನಡೆಯುತ್ತಿಲ್ಲ ಎಂದು ಹೇಳಬಹುದು, ಅಂತಹದು ಯಾವುದೂ ನನ್ನ ಗಮನಕ್ಕೆ ಬಂದಿಲ್ಲ.

ಶ್ರೀಮತಿ ಚಂಪಾಬಾಯಿ ಭೋಗಲೆ.—ರಂಜೆ ಕುಂಜೆ ಸಲುವಾಗಿ ಒಯ್ಯುತ್ತಿರುವ ಮರಗಳನ್ನೂ ಸಹ ಈಗ ಬಿಡುತ್ತಿಲ್ಲ, ಹಿಡಿದುಕೊಂಡು ಬಿಡುತ್ತಾರೆ ಅದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಶ್ರೀ ಬಿ. ರಾಚಯ್ಯ.—ಠಾಣಿಗಳಲ್ಲಿ ಹೋಗುವುದನ್ನು ಹಿಡಿದಿದ್ದೇವೆ, ಗಾಡಿಗಳಲ್ಲಿ ಹೋಗುವುದನ್ನು ಹಿಡಿದಿದ್ದೇವೆ, ತಲೆ ಹೊರೆ ಹೊತ್ತುಕೊಂಡು ಹೋಗುತ್ತಾ ಇದ್ದುದನ್ನು ಹಿಡಿದಿದ್ದೇವೆ. ಆದ್ದರಿಂದ ಕಳ್ಳ ಸಾಗಾಣಿಕೆಯಾಗುವುದು ಅದು ಯಾವ ರೂಪದಲ್ಲೇ ಆಗಲಿ ಅದನ್ನು ಹಿಡಿದು ಅಂತಹವರ ಮೇಲೆ ಕೇಸು ಹಾಕುತ್ತಾ ಇದ್ದೇವೆ ಮತ್ತು ಅವರಿಗೆ ಶಿಕ್ಷೆ ಕೊಡುತ್ತಾ ಇದ್ದೇವೆ.

ಶ್ರೀ ಸಿದ್ಧಯ್ಯ ಕಾಶೀಮಠ್.—ಠಾಣಿಗಳಲ್ಲಿ ಹೋಗುತ್ತಿದ್ದ ಕಳ್ಳ ಸಾಗಾಣಿಕೆಯನ್ನು ಹಿಡಿದು ಎಷ್ಟು ಕೇಸುಗಳನ್ನು ಹಾಕಿದ್ದೀರಿ ?

ಶ್ರೀ ಬಿ. ರಾಚಯ್ಯ.—ಅದಕ್ಕೆ ಬೇರೆ ಒಂದು ಪ್ರಶ್ನೆಯನ್ನು ಕೇಳಿದರೆ ಉತ್ತರ ಹೇಳಬಹುದು.

ಶ್ರೀಮತಿ ಚಂಪಾಬಾಯಿ ಭೋಗಲೆ.—ರೈತರು ತೆಗೆದುಕೊಂಡು ಹೋಗತಕ್ಕ ಮರ ಮಟ್ಟುಗಳನ್ನು ಹಿಡಿದುಕೊಳ್ಳದೇ ಇರುವಂತೆ ಮಾಡಲು ಈಗಿರತಕ್ಕ ಕಾನೂನನ್ನು ಸ್ವಲ್ಪ ಸಡಿಲ ಮಾಡುತ್ತೀರಾ ?

ಶ್ರೀ ಬಿ. ರಾಚಯ್ಯ.—ಮಲೆನಾಡು ಪ್ರದೇಶದಲ್ಲಿ ಕೆಲವು ಕಡೆ ಮಲೆನಾಡು ಪ್ರಿವಿಲೇಜಸ್ ಅಂತ ಹೇಳಿ ರೈತರ ಸಲುವಾಗಿ ಕೆಲವು ರಿಯಾಯಿತಿಗಳನ್ನು ಕೊಟ್ಟಿದ್ದೇವೆ. ಆದರೂ ಎಲ್ಲ ಹೆಚ್ಚಿನ ಅರಣ್ಯ ಸಂಪತ್ತು ಇಲ್ಲ, ಅಂತಹ ಕಡೆ ಈ ಸೌಲಭ್ಯವನ್ನು ಕೊಡಿ ಎಂದರೆ ಆ ರೀತಿ ಕೊಡುವುದಕ್ಕೆ ಬಹಳ ಕಷ್ಟವಾಗುತ್ತದೆ.

ಶ್ರೀಮತಿ ಚಂಪಾಬಾಯಿ ಭೋಗಲೆ.—ನಮ್ಮ ಪ್ರದೇಶದಲ್ಲಿ ರೈತರಿಗೆ ಬಹಳ ತೊಂದರೆಯಾಗಿದೆ ಅದ್ದರಿಂದ ಈ ಕಾನೂನನ್ನು ಸ್ವಲ್ಪ ಸಡಿಲ ಮಾಡುತ್ತೀರಾ ಎಂದು ಕೇಳುತ್ತೇನೆ.

ಶ್ರೀ ಬಿ. ರಾಚಯ್ಯ.—ಮಲೆನಾಡು ಪ್ರಿವಿಲೇಜಸ್ ಅಂತ ಏನಿದೆ ಅದರ ಪ್ರಕಾರ ಸಾಮಾನ್ಯವಾಗಿ ಜನರಲ್ ರೂಲ್ಸ್ ಮಾಡತಕ್ಕ ಕಾಲದಲ್ಲಿ ಮಲೆನಾಡು ಎಂದು ಡಿಕ್ಲೇರ್ ಮಾಡಬೇಕಾದರೆ ಅದಕ್ಕೆ ಏನೇನು ಇನ್‌ಗ್ರೇಡಿಯಂಟ್ಸ್ ಇರಬೇಕೆಂದು ನಿಗದಿ ಮಾಡುತ್ತಾರೆಯೋ ಅದೆಲ್ಲಾ ಅಲ್ಲಿ ಇದ್ದರೆ ಅಲ್ಲೂ ಕೂಡ ಮಾಡಬಹುದು.

ಶ್ರೀ ಸಿದ್ಧಯ್ಯ ಕಾಶೀಮಠ್.—ರೈತರಿಗೂ ಕೂಡ ಈ ಒಂದು ಶುಲ್ಕವನ್ನು ಹಾಕುತ್ತಾ ಇದ್ದಾರೆ ಎಂಬುದು ಗೊತ್ತಿದೆಯೇ ?

Sri B. RACHIAH.—I have already answered that we have been charging at the rate of 1.25 nP.

ಶ್ರೀ ಸಿದ್ಧಯ್ಯ ಕಾಶೀಮಠ್.—ಈಗಲಾದರೂ ಕೂಡ ರೈತನ ಕೆಲಸದ ಸಲುವಾಗಿ ತೆಗೆದುಕೊಂಡು ಹೋಗತಕ್ಕ ಸಾಮಾನುಗಳ ಮೇಲೆ ಎಕ್ಸೆಂಪ್ಷನ್ ಕೊಡಲಿಕ್ಕೆ ಆದೇಶಕೊಟ್ಟು ಅವರಿಗೆ ಉಪಕಾರ ಮಾಡುತ್ತೀರಾ ?

ಶ್ರೀ ಬಿ. ರಾಚಯ್ಯ.—ಮೊದಲು ಒಂದು ರೂಪಾಯಿ ಕೊಟ್ಟಿತ್ತು ಈಗ 25 ಎನ್. ಪಿ. ಹೆಚ್ಚು ಮಾಡಿದ್ದೇವೆ ಎಂದಮೇಲೆ ಈಗ ಕಾಡು ಹಾಳಾಗುತ್ತಾ ಇರುವುದನ್ನು ನೋಡಿದರೆ ಮುಫತ್ತಾಗಿ ಕೊಡುವುದು ಕಷ್ಟವಾಗುತ್ತದೆ.

ಶ್ರೀ ಜಿ. ರಾಮೇಗೌಡ.—ಈ ಶುಲ್ಕದಿಂದ ವಸೂಲಾಗಬಹುದಾದ ಅಂದಾಜು ಹಣ ಎಷ್ಟು ?

ಶ್ರೀ ಬಿ. ರಾಚಯ್ಯ.—64-65ನೇ ಸಾಲಿನ ಬಡ್ಜೆಟ್ಟ್ ಬಂದಾಗ ಅದನ್ನು ತಾವೇ ನೋಡ ಬಹುದು.

ಶ್ರೀ ಟಿ. ಮಾದಯ್ಯ ಗೌಡ.—ಈ ಬೊಂಬುಗಳನ್ನು ಮಂಕರಿ ಮುಂತಾದ ಸಾಮಾನುಗಳನ್ನು ಮಾಡತಕ್ಕ ಬಡ ಜನರಿಗೆ ರಿಯಾಯಿತಿ ದರದಲ್ಲಿ ಕೊಡುವುದಕ್ಕೆ ಏನಾದರೂ ಏರ್ಪಾಡು ಮಾಡಿದ್ದೀರಾ ಅಥವಾ ಎಲ್ಲಕ್ಕೂ ಒಂದೇ ಮುಂತ್ರ ಎಂದು ಮಾಡಿದ್ದೀರಾ ?

ಶ್ರೀ ಬಿ. ರಾಚಯ್ಯ.—ಈಗ ಹಾಕಿರುವುದೇ ರಿಯಾಯಿತಿ ದರ.

ಶ್ರೀ ಬಿ. ಕೆ. ಪುಟ್ಟಯ್ಯ.—ಈಗ ಹಾಕಿರುವುದು ಬಹಳ ಜಾಸ್ತಿ ದರ ಎಂದು ಕಾಣುತ್ತದೆ. ಇದರಿಂದ ಸರ್ಕಾರದವರಿಗೆ ಏನು ಉತ್ಪತ್ತಿ ಬರುತ್ತದೆ ಎಂದು ನಿರೀಕ್ಷೆ ಮಾಡುತ್ತೀರಿ ?

ಶ್ರೀ ಬಿ. ರಾಚಯ್ಯ.—ಸಾಮಾನ್ಯವಾಗಿ ಈಗ ಬರುತ್ತಿರುವುದರ ಮೇಲೆ ಒಂದು 25 ಪರ್ಸೆಂಟ್ ಜಾಸ್ತಿ ಬರಬಹುದು ಎಂದು ಕಾಣುತ್ತದೆ.

ಶ್ರೀ ಇ. ನಾರಾಯಣ ಗೌಡ.—ಅಕ್ರಮ ಸಾಗಾಣಿಕೆಯ ಬಗ್ಗೆ ಸರ್ಕಾರದವರು ಒಂದು ನಿರ್ದೇಶನ ಕೊಟ್ಟಿದ್ದೇವೆ ಎಂದು ಹೇಳಿದಿರಿ, ಇದು ಬಯಲು ಸೀಮೆಗೂ ಅನ್ವಯಿಸುತ್ತದೆಯೇ ?

ಶ್ರೀ ಬಿ. ರಾಚಯ್ಯ.—ಇದು ಎಲ್ಲಾ ಕಡೆಗೂ ಅನ್ವಯಿಸುತ್ತದೆ.

ಶ್ರೀ ಎನ್. ಹುಚ್ಚಮಾಸ್ತಿ ಗೌಡ.—ರಾಜ್ಯ ಪುನರ್ವಿಂಗಡಣೆಯಾಗುವುದಕ್ಕೆ ಮುಂಚೆ ಉತ್ತರ ಕನ್ನಡ ಜಿಲ್ಲೆಯಲ್ಲಿ ಇದ್ದ ಅರಣ್ಯದಲ್ಲಿ ಬಹಳ ರಿಯಾಯಿತಿಗಳನ್ನು ಕೊಟ್ಟಿದ್ದರು. ಅದು ಮಲೆನಾಡಿನ ಎಲ್ಲಾ ಪ್ರದೇಶಗಳಿಗೂ ಅನ್ವಯವಾಗುತ್ತಿದೆಯೇ ?

ಶ್ರೀ ಬಿ. ರಾಚಯ್ಯ.—ಇನ್ನೂ ಅನ್ವಯವಾಗುತ್ತಾ ಇಲ್ಲ. ಯೂನಿಫಾರಂ ರೂಲ್ಸ್ ಮಾಡಿದಾಗ ಅದನ್ನು ಅನ್ವಯಿಸಬೇಕೆಂದು ಇದೆ.

ಶ್ರೀ ಟಿ. ಡಿ. ದೇವೇಂದ್ರಪ್ಪ.—ಹಿಂದೆ ಮಲೆನಾಡಿನಲ್ಲಿ ರೈತರಿಗೆ ಸ್ವಂತ ಉಪಯೋಗಕ್ಕೆ ಕಟ್ಟಿಗೆ ಮುಂತಾದುವುಗಳನ್ನು ಮನೆಗೆ ತರಲಿಕ್ಕೆ ಅವಕಾಶವನ್ನು ಕೊಡುತ್ತಾ ಇದ್ದರು. ಅದನ್ನು ನಿಲ್ಲಿಸಿರುವು ದಕ್ಕೆ ಕಾರಣವೇನು ?

ಶ್ರೀ ಬಿ. ರಾಚಯ್ಯ.—ನಿಲ್ಲಿಸಿಲ್ಲ.

ಶ್ರೀ ಇ. ನಾರಾಯಣ ಗೌಡ.—ಬಯಲು ಪ್ರದೇಶದಲ್ಲಿ ರೈತರು ತಮ್ಮ ಸ್ವಂತ ಹಿಡುವಳಿಯಿಂದ ಸಾಮಾನುಗಳನ್ನು ಸಾಗಿಸುವಾಗಲೂ ಕೂಡ ತಾವು ಆದೇಶ ಕೊಟ್ಟಿರುವ ನಿಯಮವನ್ನು ಸರಿಸಿ ರೈತರಿಗೆ ಕಿರುಕುಳ ಕೊಡುತ್ತಾ ಇರುವುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಬಿ. ರಾಚಯ್ಯ.—ಅವರು ಇಂತಹ ಕಡೆಯಿಂದ ಸೌದೆ ತರುತ್ತೇವೆ ಎಂದು ಮೊದಲೇ ತಿಳುವಳಿಕೆ ಕೊಡಬೇಕು, ಇಲ್ಲದೇ ಇದ್ದರೆ ಅವರನ್ನೂ ಕೂಡ ಚೆಕ್ ಮಾಡುತ್ತಾರೆ.

ಶ್ರೀ ಟಿ. ಮಾದಯ್ಯ ಗೌಡ.—ಕಾಗದ ತಯಾರು ಮಾಡುವುದಕ್ಕೆ ಬೊಂಬುಗಳನ್ನು ಕೊಡು ವಾಗ ಅದಕ್ಕೆ ಬೇರೆ ದರ ಇದೆಯೇ ?

ಶ್ರೀ ಬಿ. ರಾಚಯ್ಯ.—ಹೌದು ಅದಕ್ಕೆ ಬೇರೆ ದರ ಇದೆ.

ಶ್ರೀ ಟಿ. ಮಾದಯ್ಯ ಗೌಡ.—ಕಡಮೆ ಇದೆಯೇ ಜಾಸ್ತಿ ಇದೆಯೇ ?

ಶ್ರೀ ಬಿ. ರಾಚಯ್ಯ.—ಕಡಿಮೆ ಇದೆ.

ಶ್ರೀ ಟಿ.ಡಿ. ದೇವೇಂದ್ರಪ್ಪ.—ಮಾಫೀ ಲೈಸೆನ್ಸ್ ಒಣಗಿದ ಕಟ್ಟಿಗೆಗೂ ಕೊಡುತ್ತೀರೋ ಅಥವಾ ಹಸಿ ಕಟ್ಟಿಗೆಗೆ ಮಾತ್ರವೋ ;

ಶ್ರೀ ಬಿ. ರಾಚಯ್ಯ.—ಮೊದಲು ಒಣ ಕಟ್ಟಿಗೆಗೆ ಮಾತ್ರ ಕೊಡುತ್ತಾ ಇದ್ದರು. ಈಗ ಹಸಿ ಕಟ್ಟಿಗೆಯನ್ನೂ ಕೂಡ ಗೊತ್ತು ಮಾಡಲ್ಪಟ್ಟ ಪ್ರದೇಶದಿಂದ ತರಬಹುದು ಎಂದು ಮಾಡಿದ್ದೇವೆ.

ಶ್ರೀ ವಿ. ಎಸ್. ಲಕ್ಷ್ಮೀಕಾಂತಪ್ಪ.—ಸರ್ಕಾರದವರು ಶುಲ್ಕ ಹೆಚ್ಚು ಮಾಡಿರುವುದರಿಂದ ಅಕ್ರಮ ಸಾಗಾಣಿಕೆ ಹೆಚ್ಚಾಗಿದೆ ಎಂಬುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಶ್ರೀ ಬಿ. ರಾಚಯ್ಯ.—ಇಲ್ಲ ಅಕ್ರಮ ಸಾಗಾಣಿಕೆ ಬಹುಶಃ ಈಗ ಕಡಿಮೆಯಾಗಿದೆ ಎಂದು ಸರ್ಕಾರದ ಅಭಿಪ್ರಾಯ.

ಶ್ರೀ ಆರ್. ಎನ್. ಲಕ್ಷ್ಮೀಪತಿ.—ಈಗ ರೈತರು ತಮ್ಮ ಖಾಸಗಿ ಜಮೀನಿನಲ್ಲಿರತಕ್ಕ ಮರವನ್ನು ತರಬೇಕಾದರೆ ತಮ್ಮ ಸ್ವಂತ ಉಪಯೋಗಕ್ಕೆ ಸೌದೆಗೆ ಉಪಯೋಗಿಸಿಕೊಳ್ಳಬೇಕಾದರೆ ಯಾರಿಗೆ ಅರ್ಜಿ ಕೊಡಬೇಕು? ಅಮಲ್ದಾರರಿಗೆ ಅರ್ಜಿ ಕೊಡಬೇಕು, ಶೇಕದಾರರು ಪರ್ಮಿಷನ್ ಕೊಡಬೇಕು,

ಇದಕ್ಕೆ 8 ರೂಪಾಯಿನಿಂದ 10-12ರೂಪಾಯಿಗಳವರೆಗೂ ಆಗುತ್ತದೆ. ಇದನ್ನು ಸಡಿಲಪಡಿಸುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಬಿ. ರಾಚಯ್ಯ.—ಅದಕ್ಕೆ ಏನೇನು ಖರ್ಚು ಬೀಳುತ್ತದೆಯೋ ನನಗೆ ಗೊತ್ತಿಲ್ಲ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಹಸಿ ಸೌದೆ ತರಬಹುದು ಎಂದು ಹೇಳಿದಿರಿ. ಅದನ್ನು ಯಾವ ಮೂಲಕ ಪ್ರಸಿದ್ಧಿಪಡಿಸಿದ್ದೀರಿ? ರೈತರಿಗೆಲ್ಲಾ ಗೊತ್ತಿದೆಯೇ? ನಮ್ಮ ಕಡೆಯ ರೈತರಿಗಂತೂ ಇದರ ಕಿರುಕುಳ ಸಾಕಾಗಿ ಹೋಗಿದೆ. ಯಾವ ಪತ್ರಿಕೆಯ ಮೂಲಕ ಇದನ್ನು ಪ್ರಸಿದ್ಧಿಪಡಿಸಿದ್ದೀರಿ ?

ಶ್ರೀ ಬಿ ರಾಚಯ್ಯ.— ಕೆಲವು ಭಾಗದಲ್ಲಿ ಮಾತ್ರ ಕೂಪುಗಳಿಗೆ ಲೈಸೆನ್ಸ್ ಕೊಡುತ್ತಾ ಇರುವ ರೀತಿಯಲ್ಲಿ ಗಾಡಿಯಿಂದ ಸೌದೆ ತರುವವರಿಗೆ ಕೂಡ ಒಂದೆರಡು ಕೂಪುಗಳನ್ನು ಮಾಡಿರುತ್ತೇವೆ ಆ ಕೂಪುಗಳಿಂದ ಮಾತ್ರ ತರಬಹುದು ಮತ್ತು ಅದನ್ನು ಪ್ರಸಿದ್ಧಪಡಿಸಿದ್ದಾರೆ.

ಶ್ರೀ ಎನ್. ಹುಚ್ಚಮಾಸ್ತಿ ಗೌಡ.—ತಲೆಯ ಮೇಲೆ ಹೊರೆ ತೆಗೆದುಕೊಂಡು ಹೋಗತಕ್ಕ ನೆಪದಲ್ಲಿ ಬೆಲೆ ಬಾಳತಕ್ಕ ಮರಗಳನ್ನು ಸಾಗಿಸತಕ್ಕ ಕೆಲಸದಲ್ಲಿ ಅನೇಕರು ನಿರತರಾಗಿದ್ದಾರೆ. ಅಂತಹ ವರ ಮೇಲೆ ಏನು ಕ್ರಮ ತೆಗೆದುಕೊಂಡಿದ್ದೀರಿ ಅಥವಾ ಅದನ್ನು ತಪ್ಪಿಸುವುದಕ್ಕೆ ಏನು ಕ್ರಮ ತೆಗೆದುಕೊಂಡಿದ್ದೀರಿ ?

ಶ್ರೀ ಬಿ. ರಾಚಯ್ಯ.—ಇದೆಲ್ಲಾ ನಮ್ಮ ಗಮನಕ್ಕೆ ಬಂದಿದೆ. ಅದಕ್ಕೆ ತಕ್ಕ ಕ್ರಮ ತೆಗೆದು ಕೊಳ್ಳುತ್ತಾ ಇದ್ದೇವೆ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.— ಅರಣ್ಯ ಪ್ರದೇಶದಿಂದ ಬರತಕ್ಕ ಮಾನ್ಯ ನದನ್ಯರಾದ ಶ್ರೀ ಲಕ್ಷ್ಮೀಕಾಂತಪ್ಪನವರು ಕಳ್ಳನಾಟ ವ್ಯವಹಾರ ಜಾಸ್ತಿಯಾಗಿದೆ ಎಂದರೆ ಮಂತ್ರಿಗಳು ಕಡಿಮೆ ಯಾಗಿದೆ ಎಂದು ಹೇಳುತ್ತಾರಲ್ಲ; ಇದು ಯಾವ ಆಧಾರದಮೇಲೆ ಹಾಗೆ ಹೇಳುತ್ತಾರೆ?

ಶ್ರೀ ಬಿ. ರಾಚಯ್ಯ.—ಸರ್ಕಾರಿ ಅಧಿಕಾರಿಗಳು ಒದಗಿಸಿರತಕ್ಕ ಅಂಕೀಅಂಶಗಳ ಆಧಾರದ ಮೇಲೆ ಹೇಳಿದ್ದೇನೆ.

ಶ್ರೀ ಟಿ. ಡಿ. ದೇವೇಂದ್ರಪ್ಪ.—ರೈತರಿಗೆ ಮಾಫಿ ಲೈಸನ್ಸ್ ಕೊಡುತ್ತಾರೆಂದು ಹೇಳಲಾಯಿತು. ಆ ಅಧಿಕಾರಿಗಳು ಯಾರು? ಎಲ್ಲರುತ್ತಾರೆ ?

ಶ್ರೀ ಬಿ. ರಾಚಯ್ಯ.—ಡಿಸ್ಟ್ರಿಕ್ ಫಾರೆಸ್ಟ್ ಆಫೀಸ್ ಎಂದು ಜಿಲ್ಲಾ ಕಚೇರಿಗಳಲ್ಲಿದೆ. ಅಲ್ಲಿ ರೆವಿನ್ಯೂ ಅಧಿಕಾರಿಗಳು ಲೈಸೆನ್ಸ್ ಕೊಡುತ್ತಾರೆ.

ಶ್ರೀ ಎಸ್. ಸುಬ್ಬಯ್ಯ ನಾಯಕ್.—ಒಂದೊಂದು ಕಡೆ ಬಿದಿರು ಹೂವು ಉದುರಿಹೋಗಿ ಅದು ಮತ್ತೆ ಚಿಗುರುವ ಅವಕಾಶವೇ ಇರುವುದಿಲ್ಲ; ಅಂಥಾದ್ದನ್ನು ಫ್ರೀಯಾಗಿ ತರಲು ಅವಕಾಶ ಕೊಡುತ್ತೀರಾ ?

ಶ್ರೀ ಬಿ. ರಾಚಯ್ಯ.—ಶರಾವತೀ ವ್ಯಾಲೀನಲ್ಲಿ ಮತ್ತು ಪುತ್ತೂರು ತಾಲ್ಲೂಕಿನಲ್ಲಿ ಆ ರೀತಿ ಫ್ರೀಯಾಗಿ ತೆಗೆದುಕೊಂಡು ಹೋಗಲು ಅವಕಾಶವಿದೆ. ಆದರೆ ಯಾರೂ ಬರುತ್ತಿಲ್ಲ.

ಶ್ರೀ ಜಿ. ಎ. ಗೌಡ.—ಈಗ ಶಿವಮೊಗ್ಗ ಜಿಲ್ಲೆಗೆ ಒದಗಿಸತಕ್ಕ ಸೌಲಭ್ಯಗಳನ್ನು ಇತರ ಜಿಲ್ಲೆಗಳಿಗೂ ಒದಗಿಸಲಾಗಿದೆಯೇ?

ಶ್ರೀ ಬಿ. ರಾಚಯ್ಯ.—ಈಗತಾನೆ ಒಂದು ಯೂನಿಫಾರಂ ಆರ್ಡಾಗಿದೆ. ರೂಲ್ಸನ್ನು ರಚಿಸ ಲಾಗುತ್ತಿದೆ. ಆಗ ಅದನ್ನೆಲ್ಲಾ ಪರಿಶೀಲನೆ ಮಾಡಲಾಗುತ್ತದೆ.

ಶ್ರೀ ಐ. ನಾರಾಯಣ ಗೌಡ.—ಜಿಲ್ಲಾಧಿಕಾರಿಗಳು ಸೌದೆ ತರಲುಕೊಟ್ಟ ಲೈಸನ್ಸ್‌ನ್ನು ಸೌದೆ ತರುತ್ತಿದ್ದಾಗ ಫಾರೆಸ್ಟ್ ಅಧಿಕಾರಿಗಳು ಹಿಡಿದು ಅದಕ್ಕೆ ಫಾರೆಸ್ಟ್ ಅಧಿಕಾರಿಗಳು ಕೌಂಟರ್ ಸಿಗ್ನೇಚರಿಲ್ಲ ಎಂದು ಹೇಳಿ ರೈತರಿಗೆ ತೊಂದರೆ ಕೊಡುತ್ತಿರುವುದು ಗೊತ್ತಿದೆಯೇ?

ಶ್ರೀ ಬಿ. ರಾಚಯ್ಯ.—ಕೆಲವು ಸಂದರ್ಭಗಳಲ್ಲಿ ಆ ಕೌಂಟರ್‌ಸಿಗ್ನೇಚರ್ ಬೇಕಾಗುತ್ತದೆ. ಅದಕ್ಕಾಗಿ ಅವರು ಕೇಳಿರಬಹುದು.

ಶ್ರೀ ಹೆಚ್. ಆರ್. ಕೇಶವ ಮೂರ್ತಿ.—ಈಗ ಗಾಡಿ ಮತ್ತು ರಾರಿಗಳನ್ನು ಒಂದು ಯೂನಿಟ್ ಎಂದು ಮಾಡಿದ್ದೀರಿ. ಇದಕ್ಕೆ ಒದಲಾಗಿ ತೂಕದ ಮೇಲೇಕೆ ಕೊಡಬಾರದು?

ಶ್ರೀ ಬಿ. ರಾಚಯ್ಯ.—ಕೆಲವು ಕಡೆ ಒಂದು ಕಾರ್ಟ್‌ಲೋಡಿಗಿಂತ ಜಾಸ್ತಿ ಇತ್ತೆಂದು ಕಾಂಪ್ಲೇಂಡ್ ಮಾಡಿದ ನಿದರ್ಶನವೂ ಕೂಡ ನನಗೆ ಗೊತ್ತಿದೆ. ಅದನ್ನೆಲ್ಲಾ ಚೆಕ್‌ಮಾಡುತ್ತಿದ್ದಾರೆ.

ಶ್ರೀಮತಿ ಜಿ. ಸಿ. ಭಾಗೀರಥಮ್ಮ.—ಪೇಪರ್ ಮಿಲ್ಲುಗಳಿಗೆ ಈಗ ತೋರಿಸತಕ್ಕ ರಿಯಾಯಿತಿ ಏನು ಇದೆಯೋ ಅದೇ ರಿಯಾಯಿತಿ ದರದಲ್ಲಿ ಈ ಕೈಕಸುಬಿನವರಿಗೂ ಒದಗಿಸಲು ವ್ಯವಸ್ಥೆಮಾಡು ತ್ತೀರಾ?

ಶ್ರೀ ಬಿ. ರಾಚಯ್ಯ.—ಹಿಂದೆ ಇದ್ದ ಬೊಂದಾಯಿ ಸರ್ಕಾರ ಒಂದು ಪೇಪರ್ ಮಿಲ್ಲಿಗೇ ಆ ಒಂದು ಕನ್‌ಸೆಷನ್ ತೋರಿಸಿತ್ತು. ಈಗ ನಾವು ಪೇಪರ್ ಮಿಲ್ಲುಗಳಿಗೂ 10 ರೂಪಾಯಿಗಳಿಗೆ ಕಡಮೆಯಾಗಿ ಯಾರಿಗೂ ಕೊಟ್ಟಿಲ್ಲ. ಈ ಸಣ್ಣ ಪುಟ್ಟ ಕೈಗಾರಿಕೆಗಳ ವಿಚಾರವನ್ನು ಸರ್ಕಾರದವರು ಪರಿಶೀಲನೆ ಮಾಡಬೇಕಾಗಿದೆ.

ಶ್ರೀ ಟಿ. ಡಿ. ದೇವೇಂದ್ರಪ್ಪ.—ರೈತರು ಲೈಸನನ್ಸ್ ಪಡೆದು ಬಿದರನ್ನು ತಂದಾಗ ಫಾರೆಸ್ಟ್ ಇಲಾಖೆಯವರು ದೊಡ್ಡ ಬಿದಿರನ್ನು ತಂದಿದ್ದಾರೆಂದು ಹಿಡಿದು ಅವರಿಗೆ ಕಿರುಕುಳ ಕೊಡುತ್ತಿರುವ ಸಂದರ್ಭಗಳು ತಮ್ಮ ಗಮನಕ್ಕೆ ಬಂದಿವೆಯೇ?

ಶ್ರೀ ಬಿ. ರಾಚಯ್ಯ.—ಸಣ್ಣ ಬೊಂಬಿನ ನೆಪದಲ್ಲಿ ದೊಡ್ಡ ಬೊಂಬನ್ನು ಕಡಿದರೆ ದಂಡಾ ವಸೂಲ್ಮಾಡೇ ಮಾಡುತ್ತಾರೆ.

ಶ್ರೀ ಎಸ್. ಸುಬ್ಬಯ್ಯನಾಯಕ್.—ಈಗ ಅನೇಕಾಡಿನಲ್ಲಿ ಹೂ ಉದುರಿಹೋಗಿರುವ ಬಿದಿರು ಬಹಳವಾದೆ. ಇದನ್ನು ರಿಯಾಯಿತಿ ದರದಲ್ಲಿ ಕೊಟ್ಟರೆ ಸರ್ಕಾರದವರಿಗೆ ಅನುಕೂಲವಾಗುವುದಿಲ್ಲವೆ?

ಶ್ರೀ ಬಿ. ರಾಚಯ್ಯ.—ಈಗ ಪೇಪರ್ ಕಂಪೆನಿಗಳಿಗೂ 5 ರೂಪಾಯಿ ದರದಲ್ಲಿ ಕೊಡುತ್ತಿದ್ದೇವೆ.

ಶ್ರೀ ಟಿ. ಡಿ. ದೇವೇಂದ್ರಪ್ಪ.—ಬುಡಕ್ಕೆ ಕಡಿದರೆ ತೂತು ಬೀಳುವುದಿಲ್ಲ. ಸ್ವಲ್ಪಮೇಲಕ್ಕೆ ಕಡಿದರೆ ತೂತು ಕಾಣುತ್ತದೆ. ಆದ್ದರಿಂದ ಸಣ್ಣ ಬಿದಿರಿಗೂ ತೂತ ಬೀಳುತ್ತದ್ದರಿಂದ ಇಂಥಾ ಗಾಡಿಗಳನ್ನು ಹಿಡಿದು ಗಾಡಿಗೆ 50—100 ರೂಪಾಯಿಗಳ ದಂಡಾ ವಸೂಲ್ಮಾಡುತ್ತಿರುವುದು ತಮ್ಮ ಗಮನಕ್ಕೆ ಬಂದಿದೆಯೇ?

ಶ್ರೀ ಬಿ. ರಾಚಯ್ಯ—ಸಣ್ಣ ಬೊಂಬಿಗೆ ಲೈಸನ್ಸ್‌ಗೆ ಪಡೆದು ದೊಡ್ಡ ಬೊಂಬನ್ನು ಕಡಿದರೆ ಮಾತ್ರ ಹಾಗೆ ದಂಡಾ ವಸೂಲ್ಮಾಡುತ್ತಾರೆ. ಇಲ್ಲದಿದ್ದರೇಕೆ ಮಾಡುತ್ತಾರೆ?

ಶ್ರೀ ಜಿ. ಪಿ. ಗೌಡ.—ಕೆಲವು ಕಡೆ ಎರಡೂವರೆ ರೂಪಾಯಿ ತೆಗೆದುಕೊಂಡು ಒಂದು ಗಾಡಿ ಸೌದೆಗೆ ಲೈಸನ್ಸ್ ಕೊಡುತ್ತಾರೆ. ಇನ್ನುಳಿದ ಕಡೆ ಈ ಸೌಲಭ್ಯವಿಲ್ಲ. ಆದುದರಿಂದ ಅಲ್ಲಿ ಇಲ್ಲಸಿಟ್ ಟ್ರಾನ್ಸಾಪೋರ್ಟಿಗೆ ಅವಕಾಶವಾಗುತ್ತದೆ. ಆದುದರಿಂದ ಎಲ್ಲಾ ಕಡೆಗಳಲ್ಲೂ ಒಂದೇ ರೇಟ್ ಇರುವಂತೆ ಮಾಡುವುದು ಒಳ್ಳೆಯದಲ್ಲವೇ?

ಶ್ರೀ ಬಿ. ರಾಚಯ್ಯ.—ಸಧ್ಯದಲ್ಲೇ ಮಾಡುತ್ತೇವೆ.

ಶ್ರೀ ವಿ. ಎಸ್. ಲಕ್ಷ್ಮೀಕಾಂತಪ್ಪ.—ನೀರುಮುಳುಗಡೆ ಪ್ರದೇಶದಲ್ಲಿ ಅನಾವಶ್ಯಕವಾಗಿ ಬಿದ್ದು ಕೆಟ್ಟುಹೋಗತಕ್ಕ ಬಿದಿರನ್ನು ಮತ್ತು ಇತರ ನಾಟಗಳನ್ನೂ ಕಡಮೆ ದರದಲ್ಲಿ ಕೊಡುವುದಕ್ಕೆ ಸಾಧ್ಯವಿಲ್ಲವೇ?

ಶ್ರೀ ಬಿ. ರಾಚಯ್ಯ.—ಅದನ್ನು ಆಲೋಚನೆ ಮಾಡುತ್ತೇವೆ.

ಶ್ರೀ ಟಿ. ಡಿ. ದೇವೇಂದ್ರಪ್ಪ.—ಒಂದು ಬಿದಿರನ್ನು ಇಲ್ಲಿಗಿ ತರಿಸಿ ಕೊಟ್ಟರೆ ತಾವು ಅದನ್ನು ಪರಿಶೀಲನೆ ಮಾಡುತ್ತೀರಾ?

ಶ್ರೀ ಬಿ. ರಾಚಯ್ಯ.—ಅಂಥಾ ವಿಚಾರಗಳು ನನ್ನ ಗಮನಕ್ಕೆ ಬಂದಿಲ್ಲ.

ಶ್ರೀ ಗಂಗಾಧರ ನಾಮೋಷಿ.—ದಾಂಡೇಲಿ ಪೇಪರ್ ಮಿಲ್ಲಿನ ಒಪ್ಪಂದವನ್ನು ಈಗ ಬದಲಾಯಿಸಲು ಸಾಧ್ಯವಿಲ್ಲವೇ?

ಶ್ರೀ ಬಿ. ರಾಚಯ್ಯ.—ಅದು 30 ವರ್ಷದ ಅಗ್ರಿಮೆಂಟ್. ಆದೂ ಒಂದು ಸರ್ಕಾರಮಾಡಿದ್ದು ಅದಕ್ಕೆ ಮರ್ಯಾದೆ ಕೊಡಬೇಕಾದ್ದು ಈ ಸರ್ಕಾರದ ಕರ್ತವ್ಯ.

9 A.M.

ಶ್ರೀ ಎಸ್. ಸುಬ್ಬಯ್ಯ ನಾಯಕ್.—ಬಿದಿರಿನ ತರಹದಲ್ಲಿ ಕಣಲೆ ಎನ್ನುವ ಒಂದು ತರಹದ ಬೊಂಬು ಕೂಡ ಕಾಡುಗಳಲ್ಲಿವೆ. ಅವುಗಳನ್ನೂ ಸಹ ಇದರ ಜೊತೆಯಲ್ಲಿ ತೆಗೆದುಕೊಂಡು ಹೋಗಿ ಮಾರಾಟ ಮಾಡುತ್ತಿರುವುದು ಸರಕಾರದ ಗಮನಕ್ಕೆ ಬಂದಿದೆಯೇ?

ಶ್ರೀ ಬಿ. ರಾಚಯ್ಯ.—ಇದರಲ್ಲಿ ತೊಂದರೆಯಾಗದಿರಲಿ ಎಂದು ಇದನ್ನು ಹಾಗೆ ಬಿಡಲಾಗಿದೆ.

ಶ್ರೀಮತಿ ಚಂಪಾಬಾಯಿ ಬೋಗಲೆ.—ಬಡ ರೈತರು ಅವರ ಗುಡಿಸಲುಗಳನ್ನು ಹಾಕಿಕೊಳ್ಳುವಾಗ ಇಲಾಖೆಯಲ್ಲಿರುವ ಫಾರೆಸ್ಟ್ ಗಾರ್ಡಗಳು ಬಹಳ ತೊಂದರೆ ಕೊಡುತ್ತಿರುವುದರಿಂದ ಈಗಿರುವ ಕಾನೂನನ್ನು ಸ್ವಲ್ಪ ಸಡಿಲ ಮಾಡುವುದಕ್ಕಾಗುವುದಿಲ್ಲವೇ?

ಶ್ರೀ ಬಿ. ರಾಚಯ್ಯ.—ಏನನ್ನು ಸಡಿಲಪಡಿಸಬೇಕು ಎನ್ನುವುದು ಗೊತ್ತಾಗಲಿಲ್ಲ.